ಆ) ಗ್ರಾಮಸಹಾಯಕರ ಬೇಡಿಕೆಯಂತೆ ವೇತನವನ್ನು ಪರಿಷ್ಕರಿಸಲಾಗಿದೆ,

ಇ) ಗ್ರಾಮಸಹಾಯಕರ ಬೇಡಿಕೆಯಂತೆ ಅವರನ್ನು ಸರಕಾರಿ ನೌಕರರನ್ನಾಗಿ ಪರಿಗಣಿಸಿ ಸರಕಾರಿ ನೌಕರರ ಸೌಲಭ್ಯವನ್ನು ನೀಡುವುದಲ್ಲದೆ ಅವರ ಸೇವೆಯನ್ನು ಖಾಯಂ ಮಾಡಲಾಗುವುದೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಗ್ರಾಮಸಹಾಯಕರಿಗೆ ತಿಂಗಳಿಗೆ ರೂ. ೧೨೦,೧೦ ಗಳ ಸಂಭಾವನೆ ನೀಡಲಾಗುತ್ತಿದೆ. ಆದರೆ ಜೀತಪದ್ಧತಿಯಂತೆ ದುಡಿಸುತ್ತಿರುವುದು ನಿಜವಲ್ಲ.

ಆ) ಗ್ರಾಮಸಹಾಯಕರ ಸಂಭಾವನೆಯನ್ನು ಪರಿಷ್ಕರಿಸುವ ಯಾವ ಪ್ರಸ್ತಾಪನೆಗಳೂ ಸರ್ಕಾರದ ಮುಂದಿಲ್ಲ.

ಇ) ಗ್ರಾಮಸಹಾಯಕರನ್ನು ಸರ್ಕಾರದ 'ಡಿ' ಗ್ರೂಪ್ ನೌಕರರೆಂದು ಪರಿಗಣಿಸುವ ಹಾಗೂ ತತ್ಸಮಾನವಾದ ವೇತನದ ಶ್ರೇಣಿಯ ಸೌಲಭ್ಯವನ್ನು ವಿಸ್ತರಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

೧೯೮೩ ರಲ್ಲಿ ಘಟಪ್ರಭಾ ನದಿಯಿಂದ ಮಹಾ ಪೂರದಿಂದನೊಂದ ಕುಟುಂಬಗಳಿಗೆ ಮನೆ ಕಟ್ಟಿಸಿ ಕೊಡುವ ಬಗ್ಗೆ.

೯೩೭. ಶ್ರೀ ಬಿ. ಜಿ. ಜವಳಿ (ಮುಧೋಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮುಧೋಳ ತಾಲ್ಲೂಕಿನ ನಂದಗಾಂವ ಮತ್ತು ಚಿನ್ನಾಳ ಗ್ರಾಮಕ್ಕೆ ೧೯೮೩ರಲ್ಲಿ ಘಟಪ್ರಭಾ ನದಿಗೆ ಮಹಾಪೂರ ಬಂದಾಗ ಎಷ್ಟು ಕುಟುಂಬಗಳು ನಿರಾಶ್ರಿತರಾದರು.

ಆ) ಎಷ್ಟು ಮನೆಗಳು ಜಖಂಗೊಂಡವು.

ಇ) ಈಗ ಎಷ್ಟು ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೯೮೩ರಲ್ಲಿ ಘಟಪ್ರಭಾ ನದಿಯಿಂದ ಮಹಾಪೂರ ಬಂದುಚಿನ್ನಾಳ ಗ್ರಾಮದಲ್ಲಿ ೫೭ಕುಟುಂಬಗಳು ಮತ್ತು ನಂದಗಾಂವ ಗ್ರಾಮದ ೨೪ ಕುಟುಂಬಗಳು ಮತ್ತು ತೊಂದರೆಗೀಡಾದವು,

ಆ) ಚಿನ್ನಾಳ ಗ್ರಾಮದ ೫೨ ಮನೆಗಳು ಹಾಗೂ ನಂದಗಾಂವ ಗ್ರಾಮದ ೯ ಮನೆಗಳು ಜಖಂಗೊಂಡವು.

ಇ) ಚಿನ್ನಾಳ ಗ್ರಾಮದಲ್ಲಿ ೧೨೦ ಜನತಾ ಮನೆಗಳು ಮತ್ತು ನಂದಗಾಂವ ಗ್ರಾಮದಲ್ಲಿ ೧೧೦ ಜನತಾ ಮನೆಗಳನ್ನು ಕಟ್ಟಿಸಿಕೊಡಲು ಕ್ರಮ ಕೈಕೊಂಡಿದ್ದು, ಈಗಾಗಲೇ ಕ್ರಮವಾಗಿ ೫೨ ಮತ್ತು ೪೪ ಮನೆಗಳನ್ನು ಕಟ್ಟಿಯಾಗಿದೆ.

ದೇವನ ಹಳ್ಳಿ ತಾಲ್ಲೂಕಿನ ವಿಫಲ ಭಾವಿಗಳ ಬಗ್ಗೆ,

೧೬೪೩. ಶ್ರೀ ಮುನಿಸ್ವಾಮಿಯಪ್ಪ ಪಿ.ಸಿ. (ದೇವನಹಳ್ಳಿ).— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದೇವನ ಹಳ್ಳಿ ತಾಲ್ಲೂಕಿನಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡದು ಭಾವಿ ತೋಡಿಸಿ ವಿಫಲವಾಗಿರುವ ಬಾವಿಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಹರಿಜನ ಗಿರಿಜನ ಪ್ರಮಾಣ ಎಷ್ಟು ಹಾಗೂ ಇದುವರೆಗೂ ಎಷ್ಟು ವಿಫಲವಾದ ಬಾವಿಗಳಿಗೆ ಸಾಲ ಮನ್ನಾ ಮಾಡಲಾಗಿದೆ ?

ಇ) ಇನ್ನುಳಿದಿರುವ ವಿಫಲವಾದ ಬಾವಿಗಳ ವಿಲೇವಾರಿ ಆಗದೆ ಇರತಕ್ಕಂಥಹ ಅರ್ಜಿಗಳ ಸಂಖ್ಯೆ ಎಷ್ಟು ?